ಚಿಕ್ಕಮಗಳೂರು ಜಿಲ್ಲೆಯಲ್ಲಿ ಕ್ಷೇತ್ರವಾರು ನಿವೇಶನ ರಹಿತರ ಮತ್ತು ವಸತಿ ರಹಿತರ ಮಾಹಿತಿ (ಗ್ರಾಮೀಣ ಪದೇಶ)

ಅನುಬಂಧ-ಅ

ವಿಧಾನಸಭಾ ಕ್ಷೇತ್ರ	ಮನೆ ಇಲ್ಲದವರು				ನಿವೇಶನ ಇಲ್ಲದವರು			
	ಪ.ಜಾತಿ	ಪ.ಪಂಗಡ	ಸಾಮಾನ್ಯ	ಒಟ್ಟು	ಪ.ಜಾತಿ	ಪ.ಪಂಗಡ	ಸಾಮಾನ್ಯ	ಒಟ್ಟು
ಶೃಂಗೇರಿ ಒಟ್ಟು	394	129	1500	2023	1137	310	4370	5817
ಬೀರೂರು ಒಟ್ಟು	1139	115	4283	5537	1694	89	4102	5885
ಮೂಡಿಗೆರೆ ಒಟ್ಟು	1668	471	2657	4796	1294	422	2020	3736
ಚಿಕ್ಕಮಗಳೂರು ಒಟ್ಟು	9753	36	2593	3602	543	24	1004	1571
ಕಡೂರು ಒಟ್ಟು	1130	165	4445	5740	956	202	3852	5010
ಕಡೂರು, ಬೀರೂರು ಒಟ್ಟು	97	0	295	392	71	0	144	215
ತರೀಕೆರೆ ಒಟ್ಟು	985	181	3035	4201	2371	388	5022	7781
ಒಟ್ಟು	**6386**	**1097**	**18808**	**26291**	**8066**	**1435**	**20514**	**30015**

ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರ ಕ್ರಮಗಳು.

508 (6004) **ಶ್ರೀ ಅನ್ನದಾನಿ ಕೆ. (ಮಳವಳ್ಳಿ):-** ಮಾನ್ಯ ಗ್ರಾ. ನೀ. ನೈ. ಪಂ. ರಾಜ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಮಳವಳ್ಳಿ ತಾಲ್ಲೂಕು ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ ಎಂದು ಗುರುತಿಸಲಾಗಿರುವ ಹಳ್ಳಿಗಳ ಸಂಖ್ಯೆ ಎಷ್ಟು;

ಆ. ಕುಡಿಯುವ ನೀರಿನ ಕೊರತೆ ಇರುವ ಹಳ್ಳಿಗಳಿಗೆ ನೀರು ಸರಬರಾಜು ಮಾಡಲು ಕೈಗೊಂಡ ಕ್ರಮಗಳೇನು;

ಇ. ಕುಡಿಯುವ ನೀರಿನ ಖಾಯಂ ವ್ಯವಸ್ಥೆಗಾಗಿ ಸರ್ಕಾರದ ಯೋಜನೆಗಳೇನು;

ಈ. ರಾಜ್ಯದಲ್ಲಿ ಗ್ರಾಮಾಂತರ ಕುಡಿಯುವ ನೀರಿನ ವ್ಯವಸ್ಥೆಗಾಗಿ ಸರ್ಕಾರ ನಿಗದಿ ಮಾಡಿದ ಅನುದಾನದ ಮೊತ್ತ ಎಷ್ಟು;

ಉ. ಈ ಹಣವನ್ನು ಜಿಲ್ಲಾವಾರು ಹಂಚಿಕೆ ಮಾಡಲಾಗಿದೆಯೇ;

ಊ. ಮಂಡ್ಯ ಜಿಲ್ಲೆಗೆ ಕುಡಿಯುವ ನೀರಿನ ವ್ಯವಸ್ಥೆಗಾಗಿ ನಿಗದಿ ಪಡಿಸಿದ ಹಣ ಮತ್ತು ಖರ್ಚು ಮಾಡಿದ ಹಣದ ವಿವರಗಳೇನು?

ಶ್ರೀ ಬಿ. ಸತ್ಯನಾರಾಯಣ (ಗ್ರಾ. ನೀ. ನೈ. ಪಂ. ರಾಜ್ ಸಚಿವರು)

ಅ) ಮಳವಳ್ಳಿ ತಾಲ್ಲೂಕಿನ 90 ಗ್ರಾಮ/ಜನವಸತಿಗಳು ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿವೆ.

ಆ) ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ತಾಲ್ಲುಕ್ ಮಟ್ಟದಲ್ಲಿ ಕಾರ್ಯಪಡೆಯನ್ನು ರಚಿಸಲಾಗಿದ್ದು ಹಾಲಿ ಇರುವ ನೀರು ಪೂರೈಕೆ ಯೋಜನೆಗಳನ್ನು ದುರಸ್ಥಿಗೊಳಿಸಿ ಪುನ:ಶ್ಚೇತನಗೊಳಿಸಲಾಗುತ್ತಿದೆ, ಅವಶ್ಯಕವಿರುವೆಡೆ ಹೊಸ ಕೊಳವೆ ಬಾವಿಗಳನ್ನು ಕೊರೆಯಲಾಗುತ್ತಿದೆ. ಜೊತೆ ಜೊತೆಗೆ ಅಂತರ್ಜಲ ಮರುಪೂರಣ ಕಾಮಗಾರಿಗಳನ್ನು ಮಳೆ ನೀರು ಸುಗ್ಗಿ ಕಾರ್ಯಕ್ರಮದಡಿ ಆದ್ಯತೆ ಮೇರೆಗೆ ಅನುಷ್ಠಾನಗೊಳಿಸಲಾಗುತ್ತಿದೆ. ತುರ್ತು ಸಂದರ್ಭಗಳಲ್ಲಿ ಸಾಗಾಣಿಕೆ ಮುಖೇನ ಸ್ಥಳೀಯ ಅವಶ್ಯಕತೆಯನುಸಾರ ನೀರು ಪೂರೈಕೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಅಂತರ್ಜಲ ಮರುಪೂರಣ ಕಾಮಗಾರಿಗಳು ಮತ್ತು ಮಳೆ ನೀರು ಸುಗ್ಗಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಭೂ ಮೇಲ್ಮೈ ನೀರನ್ನು ಬಳಸಿಕೊಂಡು ಶಾಶ್ವತ ಕುಡಿಯುವ ನೀರು ಪೂರೈಕೆಗಾಗಿ ಜಲ ನಿರ್ಮಲ ಸ್ವಜಲಧಾರಾ, ARWSP, ಸಬ್–ಮಿಷನ್ ಹಾಗೂ MNP ಕಾರ್ಯಕ್ರಮಗಳಡಿ ಯೋಜನೆಗಳನ್ನು ರೂಪಿಸಲಾಗುತ್ತಿದೆ.

ಈ) ರಾಜ್ಯದಲ್ಲಿ ಗ್ರಾಮೀಣ ಪ್ರದೇಶಗಳ ಕುಡಿಯುವ ನೀರಿನ ವ್ಯವಸ್ಥೆಗಾಗಿ ಕೇಂದ್ರ, ರಾಜ್ಯ ವಿದೇಶೀ ನೆರವಿನ ಯೋಜನೆಗಳಡಿ ಒಟ್ಟು ರೂ. 580.00 ಕೋಟಿ ಅನುದಾನವನ್ನು 2005–06ರ ಸಾಲಿಗೆ ಒದಗಿಸಲಾಗಿದೆ.

ಉ) ಈ ಹಣವನ್ನು ಜಿಲ್ಲಾವಾರು ಪ್ರಗತಿ ಮತ್ತು ಬೇಡಿಕೆ ಆಧರಿಸಿ ಬಿಡುಗಡೆ ಮಾಡಲಾಗುವುದು.

ಊ) 2005–06ನೇ ಸಾಲಿನಲ್ಲಿ ಕುಡಿಯುವ ನೀರು ಪೂರೈಕೆ ಯೋಜನೆಗಳ ಸಲುವಾಗಿ ಮಂಡ್ಯ ಜಿಲ್ಲೆಗೆ ಕೇಂದ್ರ ವಲಯದಡಿ ರೂ. 271.79 ಲಕ್ಷ ಹಾಗೂ ರಾಜ್ಯ ವಲಯದಡಿ ರೂ. 121.00 ಲಕ್ಷಗಳನ್ನು ಜೂನ್ 2005ರ ಅಂತ್ಯಕ್ಕೆ ಬಿಡುಗಡೆ ಮಾಡಿದ್ದು ಜೂನ್ 2005ರ ಅಂತ್ಯಕ್ಕೆ ಒಟ್ಟು ರೂ. 199. 76 ಲಕ್ಷ ವೆಚ್ಚವಾಗಿದೆ.

ಗ್ರಾಮೀಣ ರಸ್ತೆಗಳನ್ನು ಅಭಿವೃದ್ಧಿಪಡಿಸುವುದು

510 (5728) ಶ್ರೀ ಬಾಲರಾಜ್ ಎಸ್. (ಕೊಳ್ಳೇಗಾಲ):– ಮಾನ್ಯ ಗ್ರಾ.ಪಂ. ರಾಜ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1. ಕೊಳ್ಳೇಗಾಲ ಕ್ಷೇತ್ರದಲ್ಲಿನ ಜಿಲ್ಲಾ ಪಂಚಾಯತ್ ಮತ್ತು ಗ್ರಾಮೀಣ ರಸ್ತೆಗಳು ಅಭಿವೃದ್ಧಿಯನ್ನೇ ಕಾಣದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

2. ಒಟ್ಟು ಎಷ್ಟು ಕಿ.ಮೀ. ರಸ್ತೆಗಳು

1) ಡಾಂಬರೀಕರಣವಾಗಿದೆ 2) ಎಷ್ಟು ಜಲ್ಲಿ ರಸ್ತೆಗಳಾಗಿವೆ 3) ಇನ್ನೂ ಜಲ್ಲಿ ಡಾಂಬರೀಕರಣಕ್ಕಾಗಿ ಉಳಿದಿರುವ ರಸ್ತೆಗಳೆಷ್ಟು:

3. ಈ ರಸ್ತೆಗಳನ್ನು ಪೂರ್ಣ ಅಭಿವೃದ್ಧಿಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಡಾ॥ ಹೆಚ್.ಸಿ. ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪ॥ ರಾಜ್ ಸಚಿವರು)

1. ಈ ಕ್ಷೇತ್ರದಲ್ಲೂ ಅನುದಾನ ಲಭ್ಯತೆಗೆ ಒಳಪಟ್ಟು ಗ್ರಾಮೀಣ ರಸ್ತೆಗಳನ್ನು ಅಬಿವೃದ್ಧಿಪಡಿಸಿದೆ.
2. ಕೊಳ್ಳೆಗಾಲ ಮತಕ್ಷೇತ್ರದ ರಸ್ತೆಗಳ ವಿವರ

1	ಡಾಂಬರೀಕರಣವಾಗಿರುವ ರಸ್ತೆಯ ಉದ್ದ	47.45 ಕಿ.ಮೀ.
2	ಜಲ್ಲಿ ರಸ್ತೆಯ ಉದ್ದ	119.40 ಕಿಮೀ
3	ಜಲ್ಲಿ ಡಾಂಬರೀಕರಣ ಮಾಡಬೇಕಾದ ರಸ್ತೆ ಉದ್ದ (ಮಣ್ಣಿನ ರಸ್ತೆ ಉದ್ದ)	100.80 ಕಿಮೀ.
	ಒಟ್ಟು	**267.65** ಕಿ.ಮೀ

3. ಕೇಂದ್ರ ನೆರವಿನ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ, ನಬಾರ್ಡ್ ನೆರವಿನ ಯೋಜನೆ, ರಾಜ್ಯ ಸರ್ಕಾರದ ಯೋಜನೆಯಾದ ಜಿಲ್ಲಾ ಪಂಚಾಯತ್‌ಗಳಿಗೆ ಸಹಾಯಾನುದಾನ ಮತ್ತು ಲೆಕ್ಕ ಶೀರ್ಷಿಕೆ –5054 ಗ್ರಾಮೀಣ ರಸ್ತೆ ಮತ್ತು ಸೇತುವೆ ನಿರ್ಮಾಣ, 11ನೇ ಹಣಕಾಸು ಯೋಜನೆ, ಸಂಪೂರ್ಣ ಗ್ರಾಮೀಣ ರೋಜ್ಗಾರ್ ಯೋಜನೆ ಇತ್ಯಾದಿ ಶೀರ್ಷಿಕೆಯಡಿ ಅನುದಾನ ಲಭ್ಯತೆಗೆ ಅನುಗುಣವಾಗಿ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.